**22 ಸೆಪ್ಟೆಂಬರ್ 2017**

**ಜಾಗೃತಿ ಕೋ-ಅಪರೇಟಿವ್ ಆರ್ಬನ್ ಬ್ಯಾಂಕ್ ಲಿಮಿಟೆಡ್ , ಹೈದರಾಬಾದ್, ತೆಲಂಗಾಣ– ಇದಕ್ಕೆ ದಂಡ**

ಭಾರತೀಯ ರಿಜರ್ವ್ ಬ್ಯಾಂಕು, ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ 1949 (ಸಹಕಾರ ಸಂಘಗಳಿಗನ್ವಯಿಸುವಂತೆ) ರ ಕಲಂ 47A (1)(b) ಜೊತೆ ಪ್ರಕರಣ 46 (4) ರ ಅನ್ವಯ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ , ಭಾರತೀಯ ರಿಜರ್ವ್ ಬ್ಯಾಂಕು ನೀಡಿದ್ದ ನಿರ್ದೇಶನಗಳ ಉಲ್ಲಂಘನೆ ಮತ್ತು ಬ್ಯಾಂಕಿನ ನಿರ್ದೇಶಕರು ಹಾಗೂ ಅವರ ಸಂಬಂಧಿತರಿಗೆ ನೀಡುವ ಸಾಲದ ಬಗ್ಗೆ ನೀಡಿದ್ದ ಮಾರ್ಗದರ್ಶನಗಳ ಉಲ್ಲಂಘನೆ ಕಾರಣ ಜಾಗೃತಿ ಕೋ-ಅಪರೇಟಿವ್ ಆರ್ಬನ್ ಬ್ಯಾಂಕ್ ಲಿಮಿಟೆಡ್ , ಹೈದರಾಬಾದ್, ತೆಲಂಗಾಣ ಇದಕ್ಕೆ ರೂ.50 ಸಾವಿರ ದಂಡವನ್ನು ವಿಧಿಸಿದೆ.

ಭಾರತೀಯ ರಿಸರ್ವ್ ಬ್ಯಾಂಕ್ ಈ ಬ್ಯಾಂಕಿಗೆ ಕಾರಣ ಕೇಳಿ ನೋಟೀಸ್ ಜಾರಿ ಮಾಡಿದ್ದು, ಇದಕ್ಕೆ ಬ್ಯಾಂಕ್ ಲಿಖಿತ ಉತ್ತರ ನೀಡಿದೆ.. ಪ್ರಕರಣದ ವಾಸ್ತವಾಂಶಗಳನ್ನು ಹಾಗೂ ಬ್ಯಾಂಕಿನ ಉತ್ತರವನ್ನು ಮತ್ತು ಖುದ್ದಾಗಿ ನೀಡಿದ ಹೇಳಿಕೆಯನ್ನು ಪರಿಶೀಲಿಸಿದ ತರುವಾಯ ಉಲ್ಲಂಘನೆಯು ಸಾಬೀತಾಗಿದೆಯೆಂದು ಪರಿಗಣಿಸಿ, ಬ್ಯಾಂಕು ದಂಡನಾರ್ಹವೆಂದು ಭಾರತೀಯ ರಿಸರ್ವ್ ಬ್ಯಾಂಕ್ ತೀರ್ಮಾನಿಸಿದೆ.

**ಅಜಿತ್ ಪ್ರಸಾದ್**
ಸಹಾಯಕ ಸಲಹೆಗಾರರು

**ಪತ್ರಿಕಾ ಪ್ರಕಟಣೆ : 2017-2018/816**